# ಅಪ್ಪಾಜಿಯ ಅಂತ್ಯಸಂಸ್ಕಾರ ನಾನೇ ಏಕೆ ಮಾಡಿದೆ?

■ ಧಾರಿಣಿ ಮಾಯಾ

'ಹೆಣ್ಣುಮಕ್ಕಳು ತಮ್ಮ ತಂದೆ/ತಾಯಿಯ ಅಂತ್ಯಸಂಸ್ಕಾರ ಮಾಡಬಹುದೇ...?' ಈ ವಿಷಯ ಸಾಮಾಜಿಕ ಚರ್ಚೆಗೆ ಗ್ರಾಸವಾಗಿದ್ದು, ಇದರ ಕುರಿತು ವ್ಯಾಪಕ ಚರ್ಚೆಯಾಗಬೇಕು ಎಂಬ ಕೂಗು ಬಹಳ ಹಿಂದಿನಿಂದಲೂ ಕೇಳಿಬಂದಿದೆ. ಇದು ನನ್ನ ವೈಯಕ್ತಿಕ ಅನುಭವವನ್ನು ಬರೆಯಲು ಪ್ರೇರಣೆಯಾಯಿತು.

ಮೊನ್ನೆ ಯಾರೋ ಒಬ್ಬರು ಸಿಕ್ಕಿ ಕೇಳಿದರು, 'ನಿಮ್ಮ ತಂದೆ ತೀರಿಹೋದರಲ್ಲ, ಅವರಿಗೆ ಗಂಡು ಮಕ್ಕಳಿಲ್ಲವಲ್ಲ, ಯಾರು ಅವರ ಕ್ರಿಯಾಕರ್ಮಗಳನ್ನು ಮಾಡಿದ್ದು?'

***

ನಮ್ಮ ಸಂಬಂಧಿಕರಿಂದ (ಮಹಿಳೆ) ಒಂದು ಫೋನ್ ಕಾಲ್, 'ಅಯ್ಯೋ, ನೀನೇ ನಿನ್ನ ತಂದೆಯ ಚಿತೆಗೆ ಬೆಂಕಿ ಇಟ್ಟಂತೇ? ಹೆಣ್ಣುಮಕ್ಕಳು ಅದನ್ನೆಲ್ಲಾ ಮಾಡಬಾರದಲ್ವಾ? ತಿಂಗಳ ಪೂಜೆಯನ್ನೂ ಹೆಣ್ಣುಮಕ್ಕಳು ಮಾಡಬಾರದಲ್ವಾ?'

***

ನನ್ನ ತಂದೆಯ ಕಾರ್ಯಗಳೆಲ್ಲಾ ಮುಗಿದ ಮೇಲೆ 'ಹೆಣ್ಣುಮಕ್ಕಳು ಕ್ರಿಯಾಕರ್ಮಗಳನ್ನು ಮಾಡುವುದು ನಿಷಿದ್ಧವೇನಲ್ಲ' ಎಂಬ ಚಿಕ್ಕ ಬರಹವನ್ನು ಸಾಮಾಜಿಕ ತಾಣದಲ್ಲಿ ಹಂಚಿಕೊಂಡಿದ್ದೆ. ಅದನ್ನು ಓದಿದ ಒಬ್ಬರು (ಪುರುಷ), 'ಹೆಣ್ಣುಮಕ್ಕಳು ಅಂತ್ಯಸಂಸ್ಕಾರ ಮಾಡಿದರೆ ಸತ್ತವರಿಗೆ ಮೋಕ್ಷ ಸಿಗುವುದಿಲ್ಲ' ಎಂದು ನನಗೆ ಮೆಸೇಜ್ ಮಾಡಿದ್ದರು.

***

ಇಲ್ಲಿ ಉದ್ಭವಿಸಿರುವ ಪ್ರಶ್ನೆ ಏನೆಂದರೆ, ಹೆಣ್ಣುಮಕ್ಕಳು ಅಂತ್ಯಕ್ರಿಯೆ ಮಾಡಬಾರದು ಎಂದು ಯಾವ ಕಾನೂನು ಕಟ್ಟಳೆ ಹೇಳುತ್ತದೆ? ಗಂಡು ಮಕ್ಕಳು ಕ್ರಿಯಾಕರ್ಮಗಳನ್ನು ಮಾಡಿದರೆ ಮಾತ್ರ ತಂದೆ/ತಾಯಿಗೆ ಮೋಕ್ಷ ಪ್ರಾಪ್ತಿಯಾಗುವುದು ಎಂಬುದು ನಮ್ಮ ಹಿಂದೂ ಧಾರ್ಮಿಕ ಸಂಪ್ರದಾಯದಲ್ಲಿ ಹೇಳಲಾಗಿದ್ದು ಇಂದಿಗೂ ಅದೇ ನಂಬಿಕೆ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ.

ಇದು ಸಂಪ್ರದಾಯವಾಗಿ ಬೆಳೆದು ಬಂದಿದೆಯೇ ಹೊರತು ಯಾವ ಕಾನೂನು ಕೂಡ ಈ ಹಕ್ಕುಬಾಧ್ಯತೆಯ ಬಗ್ಗೆ ಹೇಳಿಲ್ಲ. ಈ ಸಂಪ್ರದಾಯ/ಆಚರಣೆಗಳನ್ನು ಮನುಷ್ಯ ಮೊದಲಿನಿಂದಲೂ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಬರುತ್ತಿದ್ದಾನೆ.

ಗಂಡು ಮಕ್ಕಳಿಲ್ಲದ ಮನೆಗಳಲ್ಲಿ ಅವರ ಅಣ್ಣತಮ್ಮಂದಿರು ಅಥವಾ ಹತ್ತಿರದ ಸಂಬಂಧಿಕರು (ಪುರುಷರು) ಕ್ರಿಯಾಕರ್ಮಗಳನ್ನು ಮಾಡುವುದಿದೆ. ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಹೆಣ್ಣುಮಕ್ಕಳು ಅಥವಾ ಅವರ ಮಡದಿಯೇ ಕ್ರಿಯಾಕರ್ಮವನ್ನು ಮಾಡಬಹುದು ಎಂದು ಕೂಡ ಇರುವುದು ನಮ್ಮ ಸಮಾಜಕ್ಕೆ ಅರಿವಿದ್ದಂತಿಲ್ಲ.

'ಅಂಜಿಕೆ, ಗೊಂದಲ, ದ್ವಂದ್ವದಲ್ಲಿರುವ ಹೆಣ್ಣುಮಕ್ಕಳಿಗೆ,' ಇಂದಿಗೂ ಸಾಕಷ್ಟು ಮನೆ ಮನಗಳಲ್ಲಿ 'ಗಂಡು ಮಕ್ಕಳೇ ಶ್ರೇಷ್ಠ, ತಂದೆ ತಾಯಿಯ ಪಿಂಡ ಪ್ರದಾನ ಮಾಡುವುದಕ್ಕಾದರೂ ಒಂದು ಗಂಡು ಮಗು ಬೇಕು' ಎನ್ನುವವರಿಗೆ ಹಾಗೂ 'ಇದು ಹೇಗೆ ಸಾಧ್ಯ?' ಎಂದು ಪ್ರಶ್ನಿಸುವ ನಮ್ಮ ಸಮಾಜಕ್ಕೆ...

ಇಲ್ಲಿ ಸ್ವಲ್ಪ ಕೇಳಿ...

## ಬದಲಾವಣೆಯ ಹೆಜ್ಜೆಯಲ್ಲಿ...

'ಕನ್ನಡತಿ' ಎಂಬ ಧಾರಾವಾಹಿಯಲ್ಲಿ ಭುವನೇಶ್ವರಿ ಎಂಬ ಮುಖ್ಯ ಪಾತ್ರಧಾರಿ ತಾನೇ ತನ್ನ ತಂದೆಯ ಚಿತೆಗೆ ಬೆಂಕಿ ಹಚ್ಚುವುದನ್ನು ನೋಡಿದಾಗ ನಮ್ಮ ಸಮಾಜಕ್ಕೆ ಇಂಥ ಒಂದು ಆಂದೋಲನ ಬೇಕು ಎಂದು ಮೆಚ್ಚಿಕೊಂಡಿದ್ದೆ. ನಾಲ್ಕು ವರ್ಷಗಳ ಹಿಂದೆ ನಟಿ ಹಾಗೂ ಟೀವಿ ನಿರೂಪಕಿ ಮಂದಿರಾ ಬೇಡಿ ತಮ್ಮ ಗಂಡನ ಅಂತ್ಯಸಂಸ್ಕಾರದ ಸಕಲ ಕಾರ್ಯಗಳನ್ನು ಮಾಡಿದಾಗ ಪುರುಷ

